# ಕೇಶರಚನೆ ಹೇಗಿರಬೇಕು ?

## ಮನೋಗತ

೧೯೬೦-೭೦ ರ ದಶಕದಲ್ಲಿ ರಾಜೇಶ ಖನ್ನಾ ಎಂಬ ನಟನು ತಲೆಯ ಮಧ್ಯಭಾಗದಲ್ಲಿ ಬೈತಲೆ ತೆಗೆಯುತ್ತಾನೆಂದು ಕೆಲವು ಪುರುಷರೂ ತಲೆಯ ಮಧ್ಯಭಾಗದಲ್ಲಿ ಬೈತಲೆ ತೆಗೆಯಲು ಪ್ರಾರಂಭಿಸಿದರು. 'ಸಾಧನಾ' ಎಂಬ ನಟಿಯು ಹಣೆಯ ಮೇಲೆ ಕೂದಲುಗಳನ್ನು ತೆಗೆದುಕೊಂಡು ಅವುಗಳನ್ನು ಕತ್ತರಿಸುತ್ತಿದ್ದಳು; ಆದುದರಿಂದ 'ಸಾಧನಾ ಕಟ್' ಎಂಬ ಹೆಸರಿನ ಕೇಶರಚನೆಯನ್ನು ಹೊಸಶೈಲಿಯೆಂದು (ಫ್ಯಾಷನ್ ಎಂದು) ಆ ಕಾಲದ ಸ್ತ್ರೀಯರು ಅನುಕರಿಸತೊಡಗಿದರು. ಚಲನಚಿತ್ರಗಳ ಅಥವಾ ಪಾಶ್ಚಾತ್ಯರನ್ನು ಅನುಕರಿಸುವ ವೃತ್ತಿಯಿಂದಾಗಿ ಹೆಚ್ಚುಕಡಿಮೆ ಇಡೀ ಸಮಾಜವು ಕೇಶರಚನೆಯ ವಿಷಯದಲ್ಲಿ ವಿವಿಧ ಹೊಸಶೈಲಿಗಳಿಗೆ ನಿಧಾನವಾಗಿ ಬಲಿಯಾಯಿತು !

ಪುರುಷರು ಎಡಬದಿಗೆ ಮತ್ತು ಸ್ತ್ರೀಯರು ಮಧ್ಯದಲ್ಲಿ ಬೈತಲೆ ತೆಗೆಯುವುದು, ಹಾಗೆಯೇ ಕೂದಲುಗಳನ್ನು ಸ್ವಚ್ಛಂದವಾಗಿ ಬಿಡದೇ ತುರುಬು (ಮುಡಿ), ಹೆರಳಿನಂತಹ ಸಾತ್ತ್ವಿಕ ಕೇಶ ರಚನೆಯ ಆಚಾರವನ್ನು ಹಿಂದೂ ಧರ್ಮವು ಪ್ರಾಚೀನ ಕಾಲದಿಂದ ಕಲಿಸಿಕೊಟ್ಟಿದೆ. ಆಚಾರಃ ಪರಮೋ ಧರ್ಮಃ । ಆಚಾರಪಾಲನೆಯಿಂದ ಧರ್ಮಪಾಲನೆಯಾಗಿ ಮನುಷ್ಯನ ವೃತ್ತಿಯು ಸತ್ತ್ವಗುಣಿಯಾಗುತ್ತದೆ. ಬದಲಾಗಿ ಪಾಶ್ಚಾತ್ಯರಂತೆ ಹೊಸರೂಢಿಗಳನ್ನು ಅಂಗೀಕರಿಸಿದರೆ ಮನುಷ್ಯನ ವೃತ್ತಿಯು ತಮೋಗುಣಿಯಾಗುತ್ತದೆ. ಹೊಸರೂಢಿ (ಫ್ಯಾಷನ್) ಯೆಂದು ಅಸಾತ್ತ್ವಿಕ ಕೇಶರಚನೆ ಮಾಡಿದರೆ ಸ್ತ್ರೀ-ಪುರುಷರು ಕೆಟ್ಟ ಶಕ್ತಿಗಳ ಆಕ್ರಮಣಗಳಿಗೆ ಬಲಿಯಾಗುವ ಸಾಧ್ಯತೆಯಿರುತ್ತದೆ.

ಈ ಗ್ರಂಥದಲ್ಲಿ ಸ್ತ್ರೀಯರು 'ಪೋನಿಟೇಲ್', 'ಫ್ರೆಂಚ್‌ರೋಲ್' 'ಬಾಯ್‌ಕಟ್' ನಂತಹ ಅಸಾತ್ತ್ವಿಕ ಕೇಶರಚನೆಯನ್ನು ಏಕೆ ಮಾಡಬಾರದು ಎಂಬುದನ್ನು ಹೇಳುವುದರೊಂದಿಗೆ, ಚಿಕ್ಕ ಹುಡುಗಿಯರು ಎರಡು ಜಡೆ, ವಯಸ್ಸಿಗೆ ಬಂದ ಮೇಲೆ ಒಂದು ಜಡೆಯನ್ನು ಹೆಣೆಯುವುದು, ಸ್ತ್ರೀಯರು ತುರುಬನ್ನು ಕಟ್ಟಿಕೊಳ್ಳುವುದು ಮುಂತಾದ ಸಾತ್ತ್ವಿಕ ಕೇಶರಚನೆಯ ವಿಷಯದಲ್ಲಿ ಶಾಸ್ತ್ರೀಯ ಜ್ಞಾನವನ್ನು ನೀಡಲಾಗಿದೆ. ಕೇಶರಚನೆಯ ವಿಷಯದಲ್ಲಿಯೂ ಸಹ ಇಷ್ಟೊಂದು ಆಳವಾದ ವಿಚಾರವನ್ನು ಹಿಂದೂ ಧರ್ಮವು ಮಾಡಿರುವುದನ್ನು ನೋಡಿ ಹಿಂದೂ ಧರ್ಮದ ಎದುರು ನತಮಸ್ತಕವಾಗಬೇಕೆನಿಸುತ್ತದೆ.

ಸ್ತ್ರೀಯರು ಸಾತ್ತ್ವಿಕ ಕೇಶರಚನೆಗಳಲ್ಲಿ (ಉದಾ. ಜಡೆ, ತುರುಬು) ಯಾವುದೇ ಕೇಶರಚನೆಯನ್ನು ಮಾಡಬಹುದು; ಆದರೆ ಆ ಕೇಶರಚನೆಯನ್ನು ಸುಶೋಭಿತಗೊಳಿಸಲು ವಿಚಿತ್ರ ಆಕಾರಗಳ ಕ್ಲಿಪ್, ಶೋಭೆಯ ವಿದೇಶೀ ಹೂವು ಮುಂತಾದವುಗಳನ್ನು ಉಪಯೋಗಿಸುವುದು ಅಯೋಗ್ಯವಾಗಿದೆ. ಸ್ತ್ರೀಯರು ಕೂದಲುಗಳಲ್ಲಿ ಮುಡಿಯಲು ಯಾವ ಎಲೆ-ಹೂವುಗಳನ್ನು ಉಪಯೋಗಿಸಬೇಕು ಎನ್ನುವುದರ ವಿವರಣೆಯನ್ನೂ ಈ ಗ್ರಂಥದಲ್ಲಿ ನೀಡಲಾಗಿದೆ. ಸಾತ್ತ್ವಿಕ ಕೇಶರಚನೆಯನ್ನು ಮಾಡಿದ ವ್ಯಕ್ತಿಗೆ ಆಧ್ಯಾತ್ಮಿಕ ಲಾಭವಂತೂ ಆಗುತ್ತದೆ, ಅದರೊಂದಿಗೆ ಇಂತಹ ಕೇಶರಚನೆಯಿಂದ ಸಾತ್ತ್ವಿಕ ಲಹರಿಗಳು ಪ್ರಕ್ಷೇಪಿಸುವುದ ರಿಂದ ಇಂತಹ ಕೇಶರಚನೆಯನ್ನು ನೋಡುವವರ ಮನೋದೇಹದ ಮೇಲೆಯೂ (ಮನಸ್ಸಿನ ಮೇಲೆ) ಒಳ್ಳೆಯ ಪರಿಣಾಮವಾಗುತ್ತದೆ.

ಈ ಗ್ರಂಥವನ್ನು ಓದಿ ಅಸಾತ್ತ್ವಿಕ ಕೇಶರಚನೆಯ ದುಷ್ಪರಿಣಾಮಗಳನ್ನು ತಿಳಿದುಕೊಂಡು ಲಾಭದಾಯಕವಾಗಿರುವ ಸಾತ್ತ್ವಿಕ ಕೇಶರಚನೆಯನ್ನು ಮಾಡುವ ಸದ್ಬುದ್ಧಿಯು ಎಲ್ಲ ಸ್ತ್ರೀ-ಪುರುಷರಿಗೆ ಲಭಿಸಲಿ ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ ! - **ಸಂಕಲನಕಾರರು**

# ಕೇಶರಚನೆ ಹೇಗಿರಬೇಕು?

## ಅನುಕ್ರಮಣಿಕೆ

(ಕೆಲವು ಮಹತ್ವದ ಅಂಶಗಳನ್ನು '*' ಈ ಗುರುತಿನಲ್ಲಿ ಕೊಡಲಾಗಿದೆ.)


卐 ಮನೋಗತ ೮

卐 ಗ್ರಂಥದಲ್ಲಿನ ಜ್ಞಾನದ ಬಗ್ಗೆ ಸೂಕ್ಷ್ಮ-ಜಗತ್ತಿನ 'ಓರ್ವ ವಿದ್ವಾಂಸ'ರು ಮಾಡಿದ ಟಿಪ್ಪಣಿ ೯

卐 'ಸೂಕ್ಷ್ಮ' ಶಬ್ದಕ್ಕೆ ಸಂಬಂಧಿಸಿದ ಕೆಲವು ಸಂಜ್ಞೆಗಳ ಅರ್ಥ ೧೩

卐 ಆಧ್ಯಾತ್ಮಿಕ ಸಂಜ್ಞೆಗಳ ಅರ್ಥ ೧೫

卐 ಜ್ಞಾನ ಪಡೆದ ಸಾಧಕಿಯರ ಪರಿಚಯ ೧೬

---

೧. ಕೇಶರಚನೆ ೧೭

೧ ಅ. ವ್ಯಾಖ್ಯೆ ೧೭

೧ ಆ. ಕೇಶರಚನೆಯ ಅಧ್ಯಾತ್ಮಶಾಸ್ತ್ರೀಯ ಮಹತ್ವ ೧೭

೨. ಬೈತಲೆಯನ್ನು ತೆಗೆಯುವುದು ೧೮

೨ ಅ. ಪುರುಷರು ಮತ್ತು ಸ್ತ್ರೀಯರು ಬೈತಲೆಯನ್ನು ಎಲ್ಲಿ ತೆಗೆಯಬೇಕು ? ೧೮

೨ ಆ. ಪುರುಷರು ಬಲಬದಿಗೆ / ಎಡಬದಿಗೆ ಬೈತಲೆಯನ್ನು ತೆಗೆಯುವುದು ೧೯

* ಪುರುಷರು ಬೈತಲೆಯನ್ನು ಬಲಬದಿಗೆ ಏಕೆ ತೆಗೆಯಬಾರದು ? ೧೯

* ಪುರುಷರು ಬೈತಲೆಯನ್ನು ಎಡಗಡೆಗೆ ಏಕೆ ತೆಗೆಯಬೇಕು ? ೨೦

೨ ಇ. ಪುರುಷನು ತಲೆಯ ಮಧ್ಯಭಾಗದಲ್ಲಿ ಬೈತಲೆ ತೆಗೆಯುವುದು ೨೦

೨ ಈ. ಸ್ತ್ರೀಯರು ಕೂದಲುಗಳ ಮಧ್ಯದಲ್ಲಿ ಬೈತಲೆಯನ್ನು ತೆಗೆಯುವುದು ೨೩

* ಮಧ್ಯಭಾಗದಲ್ಲಿ ಬೈತಲೆಯನ್ನು ತೆಗೆಯುವುದರ ಮಹತ್ವ ಮತ್ತು ಲಾಭಗಳು ೨೩

* ಶಾರೀರಿಕ ಸೌಂದರ್ಯಕ್ಕಿಂತ ಧರ್ಮಾಚರಣೆ ಮಹತ್ವದ್ದು ೨೪

೩. ಶಾಲಾ ಬಾಲಕಿಯರು ದೊಡ್ಡವರಂತೆ, ಹಾಗೆಯೇ ಪಾಶ್ಚಾತ್ಯರಂತೆ ಮಾಡುವ ಕೇಶರಚನೆ ೩೨

೩ ಅ. ಶಾಲಾ ಬಾಲಕಿಯರು ದೊಡ್ಡವರಂತೆ, ಹಾಗೆಯೇ ಪಾಶ್ಚಾತ್ಯಶೈಲಿಯ ಕೇಶರಚನೆ ಮಾಡುವುದರಿಂದ ಆಗುವ ಹಾನಿ ೩೨

೩ ಆ. ಚಿಕ್ಕ ಬಾಲಕಿಯರು ದೊಡ್ಡವರಂತೆ ಹಾಗೂ ಪಾಶ್ಚಾತ್ಯ ಪದ್ಧತಿಯಲ್ಲಿ ಕೇಶರಚನೆಯನ್ನು ಮಾಡುವುದರಿಂದ ಆಗುವ ಹಾನಿ ೩೨

೪. ಪುರುಷರ ಅಸಾತ್ತ್ವಿಕ ಕೇಶರಚನೆ ೩೩

೪ ಅ. ಪುರುಷರು ಕೂದಲನ್ನು ಬೆಳೆಸಿ ‘ಪೋನಿ ಟೇಲ್’ ಕಟ್ಟುವುದು ಅಥವಾ ಜಡೆ ಹಾಕಿಕೊಳ್ಳುವುದು ೩೩

**೫. ಸ್ತ್ರೀಯರ ಅಸಾತ್ತ್ವಿಕ ಕೇಶರಚನೆ** **೩೩**

೫ ಅ. ಸ್ತ್ರೀಯರು ಕೂದಲನ್ನು ಹಾಗೆ ಬಿಡುವುದು ೩೩

* ಸ್ತ್ರೀಯರು ಕೂದಲನ್ನು ಹಾಗೆ ಏಕೆ ಬಿಡಬಾರದು ? ೩೩
* ಹಾಗೇ ಬಿಟ್ಟ ಉದ್ದ ಕೂದಲಿನ ಸೂಕ್ಷ್ಮಜ್ಞಾನದ ಪರೀಕ್ಷೆ ೩೬
* ಸ್ತ್ರೀಯರು ಕೂದಲನ್ನು ಒಣಗಿಸಲು ಸಡಿಲವಾಗಿ ಬಿಡುವುದು, ಸಡಿಲವಾಗಿ ಬಿಟ್ಟು ಕೆಳಗೆ ಗಂಟು ಹಾಕುವುದು ಮತ್ತು ಹೊಸಶೈಲಿಯೆಂದು (ಫ್ಯಾಷನ್) ಬಾಚದೆ ಹಾಗೇ ಬಿಡುವುದು ೩೮

೫ ಆ. ಪೋನಿ ಟೇಲ್ ಕಟ್ಟುವುದು ೪೨

೫ ಇ. ‘ಫ್ರೆಂಚ್‌ರೋಲ್’ ಪದ್ಧತಿಯ ಕೇಶರಚನೆಯನ್ನು ಮಾಡುವುದು ೪೪

**೬. ಅಸಾತ್ತ್ವಿಕ ಕೇಶರಚನೆಯಿಂದಾಗುವ ಆಧ್ಯಾತ್ಮಿಕ ಸ್ತರದಲ್ಲಿನ ಹಾನಿ** **೫೪**

**೭. ಸ್ತ್ರೀಯರ ಸಾತ್ತ್ವಿಕ ಕೇಶರಚನೆ** **೫೫**

೭ ಅ. ಸಾತ್ತ್ವಿಕ ಕೇಶರಚನೆಯ ಮಹತ್ವ ೫೫

೭ ಆ. ಸ್ತ್ರೀಯರ ಸಾತ್ತ್ವಿಕ ಕೇಶರಚನೆಯ ವಿಧಗಳು ೫೬

೭ ಆ ೧. ಎಣೆಗಂಟು (ಸೂಡಿ, ಬುಚಡಾ) ಪದ್ಧತಿ ೫೬

೭ ಆ ೨. ಜಡೆಯನ್ನು ಹೆಣೆಯುವುದು ೫೮

* ಎರಡು ಜಡೆಗಳನ್ನು ಯಾರು ಹಾಕಿಕೊಳ್ಳಬೇಕು ? ೬೮

೭ ಆ ೩. ತುರುಬನ್ನು ಕಟ್ಟುವುದು ೭೦

* ತಲೆಯ ಹಿಂದೆ ತುರುಬು ಕಟ್ಟುವುದು ೭೧
* ಕುತ್ತಿಗೆಯ ಮೇಲೆ ತುರುಬು ಕಟ್ಟುವುದು ೭೧

**೮. ವಿವಿಧ ಕೇಶರಚನೆಗಳ ತುಲನೆ** **೭೬**

**೯. ಕೇಶರಚನೆಯನ್ನು ಅಸಾತ್ತ್ವಿಕವಾಗಿಸುವ ಪದ್ಧತಿಗಳು / ವಸ್ತುಗಳು** **೯೭**

* ಚೌರಿ ಕೂದಲು (ಗಂಗಾವನ) ಹಾಕುವುದು ೯೭
* ತುರುಬಿಗೆ ಜಾಲರಿಯನ್ನು ಕಟ್ಟುವುದು ೯೮
* ಮೊದಲೇ ಸಿದ್ಧಪಡಿಸಿದ (ರೆಡಿಮೇಡ್) ಕೇಶರಚನೆಗಳನ್ನು ಬಳಸುವುದು ೯೯
* ಕೂದಲುಗಳಲ್ಲಿ ಶೋಭೆಯ (ಅಲಂಕಾರಿಕ) ಅಥವಾ
* ಕೃತಕ ಎಲೆ-ಹೂವುಗಳನ್ನು ಹಾಕುವುದು ೧೦೦

**೧೦. ಸ್ತ್ರೀಯರ ಮೇಲೆ ಅಸಾತ್ತ್ವಿಕ ಮತ್ತು ಸಾತ್ತ್ವಿಕ ಕೇಶರಚನೆಗಳಿಂದಾಗುವ ಪರಿಣಾಮ** **೧೦೧**

**೧೧. ಕೇಶಾಲಂಕಾರ ಮಾಡುವುದು** ೧೦೨

೧೧ ಅ. ಕೂದಲುಗಳಲ್ಲಿ ಹೂವು / ನಿರ್ಮಾಲ್ಯವನ್ನು ಮುಡಿಯುವುದು ೧೦೨

೧೧ ಆ. ಕೂದಲಲ್ಲಿ ಮಲ್ಲಿಗೆ ಹೂವುಗಳನ್ನು ಮುಡಿದಾಗ ಅರಿವಾದ ಪರಿಣಾಮಗಳು ೧೦೫

೧೧ ಇ. ತಲೆಯಲ್ಲಿ ವಿಶಿಷ್ಟ ಎಲೆಗಳನ್ನು ಮುಡಿಯುವುದು ೧೦೬

೧೧ ಈ. ಕೂದಲುಗಳಲ್ಲಿ ಬಂಗಾರದ ಜಡೆಯನ್ನು / ಜಡೆಬಿಲ್ಲೆಗಳನ್ನು ಧರಿಸುವುದು ೧೦೯

೧೧ ಉ. ಸನಾತನವು ನಿರ್ಮಿಸಿದ ಸಾತ್ತ್ವಿಕ ಊದುಬತ್ತಿಯ ಕಡ್ಡಿಯನ್ನು ಕೂದಲುಗಳಲ್ಲಿ ಹಾಕಿಕೊಳ್ಳುವುದು ೧೧೦

೧೧ ಊ. ಮಾಸಿಕ ಸರದಿಯ ಸಮಯದಲ್ಲಿ ಸ್ತ್ರೀಯರು ತಲೆಯಲ್ಲಿ ಹೂವುಗಳನ್ನು ಏಕೆ ಮುಡಿಯಬಾರದು ? ೧೧೧

೧೧ ಎ. ವಿವಿಧ ವಸ್ತುಗಳಿಂದ ಕೂದಲನ್ನು ಅಲಂಕರಿಸಿಕೊಳ್ಳುವುದು ೧೧೨

**೧೨. ಉನ್ನತ ಸಾಧಕರು ಮತ್ತು ಸಂತರ ಕೇಶರಚನೆಗೆ ವಿಶೇಷ ಮಹತ್ವವಿರುವುದಿಲ್ಲ** ೧೧೩

---

**ಟಿಪ್ಪಣಿ :** ಈ ಗ್ರಂಥದಲ್ಲಿನ ಛಾಯಾಚಿತ್ರ ಅಥವಾ ಸೂಕ್ಷ್ಮಜ್ಞಾನದ ಚಿತ್ರಗಳಲ್ಲಿ ತೋರಿಸಿದ ಕೂದಲು (ಯಾವುದೇ ವಿಶಿಷ್ಟವಾದ ಉಲ್ಲೇಖವಿಲ್ಲದಿದ್ದಲ್ಲಿ) ಸಾಮಾನ್ಯ ವ್ಯಕ್ತಿಗಳ ಕೂದಲುಗಳಾಗಿವೆ ಎಂದು ತಿಳಿಯಬೇಕು. ಒಳ್ಳೆಯ ಆಧ್ಯಾತ್ಮಿಕ ಮಟ್ಟವಿರುವ ವ್ಯಕ್ತಿಯ ಕೂದಲುಗಳಿಂದ ಒಳ್ಳೆಯ, ಹಾಗೆಯೇ ಆಧ್ಯಾತ್ಮಿಕ ತೊಂದರೆ ಇರುವ ವ್ಯಕ್ತಿಗಳ ಕೂದಲುಗಳಿಂದ ತ್ರಾಸದಾಯಕ ಸ್ಪಂದನಗಳು ಬರುತ್ತವೆ ಎಂಬುದನ್ನು ವಾಚಕರು ಗಮನದಲ್ಲಿಡಬೇಕು.

## ತಾಮಸಿಕ (ಅಸುರೀ) ಚಿತ್ರಗಳ ಸುತ್ತಲೂ ನಾಮಜಪದ ಚೌಕಟ್ಟನ್ನು, ಅಂದರೆ ಮಂಡಲವನ್ನು ಹಾಕುವುದರ ಕಾರಣ

‘ಶಬ್ದ, ಸ್ಪರ್ಶ, ರೂಪ, ರಸ, ಗಂಧ ಮತ್ತು ಅವುಗಳಿಗೆ ಸಂಬಂಧಿಸಿದ ಶಕ್ತಿ ಒಟ್ಟಿಗೆ ಇರುತ್ತವೆ’, ಈ ಅಧ್ಯಾತ್ಮದಲ್ಲಿನ ಸಿದ್ಧಾಂತಕ್ಕನುಸಾರ ತಾಮಸಿಕ (ಅಸುರೀ) ಚಿತ್ರಗಳಿಂದ (ಉದಾ. ಪಾತಾಳದಲ್ಲಿನ ‘ಮಾಂತ್ರಿಕ’ನ ಚಿತ್ರದಿಂದ) ಕೆಟ್ಟ ಸ್ಪಂದನಗಳು ನಿರ್ಮಾಣವಾಗುತ್ತವೆ. ಹಾಗೆಯೇ ಈ ಕೆಟ್ಟ ಸ್ಪಂದನಗಳ ಕಡೆಗೆ ವಾತಾವರಣದಲ್ಲಿನ ಕೆಟ್ಟ ಶಕ್ತಿಗಳೂ ಆಕರ್ಷಿತವಾಗುತ್ತವೆ. ಇಂತಹ ಚಿತ್ರಗಳಿಂದ ತೊಂದರೆದಾಯಕ ಕಪ್ಪು ಶಕ್ತಿಯು ಪ್ರಕ್ಷೇಪಿಸುವ ಪ್ರಮಾಣವು ಹೆಚ್ಚಿಗಿರುತ್ತದೆ. ಈ ಕಪ್ಪು ಶಕ್ತಿಯಿಂದ ವಾಚಕರಿಗೆ ತೊಂದರೆಯಾಗಬಾರದೆಂದು ಇಂತಹ ಚಿತ್ರಗಳ ಸುತ್ತಲೂ ಸೂಕ್ಷ್ಮದಿಂದ ಆವಶ್ಯಕ ನಾಮಜಪವನ್ನು ಹುಡುಕಿ ಆ ನಾಮಜಪದ ಮಂಡಲವನ್ನು ಹಾಕುವುದು ಆವಶ್ಯಕವಾಗಿದೆ.